ಸ್ವಾದ

# ಮನೆಬಾಗಿಲಿಗೇ ಹ ಹ ಪಾಯಸ, ಹಲ್ವ



**ನೀವು ಹಲಸುಪ್ರಿಯರೇ? ವರ್ಷದ ಯಾವುದೇ ದಿನ, ಬೇಕು ಎಂದು ಅನಿಸಿದಾಗ, ಹಲಸಿನಹಣ್ಣಿನ (ಹ ಹ) ಪಾಕೇತನಗಳನ್ನು ಮೆಲ್ಲುವ ಕನಸು ಕಾಣುತ್ತಿದ್ದೀರಾ? ಖುಷಿಪಡಿ, ಇದು ನನಸಾಗಲು ಇನ್ನು ಇಳಿಲೆಕ್ಕ ಮಾತ್ರ!**

■ **ಶ್ರೀ ಪಡ್ರೆ**

ಹಲಸಿನ ಹಣ್ಣಿನ ಪಾಯಸ (ಪ್ರಥಮಮ್), ಜ್ಯೂಸ್, ಮುಳುಕದಂತಿರುವ ಉಣ್ಣಿಯಪ್ಪಮ್, ಹಲಸಿನ ಹಣ್ಣಿನ ಮಿಲ್ಕ್ ಶೇಕ್. ಇಂತಹ ಹತ್ತಾರು ಪಾಕಗಳನ್ನು ನೀವು ಮನೆಯಲ್ಲೇ ಕುಳಿತು ಬಿಸಿಬಿಸಿಯಾಗಿಯೇ ಸವಿಯಬಹುದು. ವರ್ಷದ ಯಾವುದೇ ದಿನಗಳಲ್ಲಿ!

ಆದರೆ ಈ ಸೌಲಭ್ಯ ಈಗ ಇರುವುದು ಕೇರಳದ ಕೊಲ್ಲಂನಲ್ಲಿ ಮಾತ್ರ.

ರಾಜ್ಯದಲ್ಲೇ ಏಕೆ, ದೇಶದಲ್ಲೇ ಮೊತ್ತಮೊದಲಿಗೆ, ಊಟದ ಮೇಜಿಗೆ ಹಲಸಿನ ಸವಿರುಚಿ ತಲುಪಿಸತೊಡಗಿರುವುದು ಕೊಲ್ಲಂನ 'ಪ್ರಪಂಚ ಗ್ರೀನ್ ಮಾರ್ಟ್'. ಇದು ಒಂದು ಸಾವಯವ ಉತ್ಪನ್ನ ಮಾರಾಟ ಸಂಸ್ಥೆ. ಈ ಮಳಿಗೆಯ 'ಚಕ್ಕಮುಕ್ಕ್' (ಹಲಸಿನ ಮೂಲೆ) ಕೌಂಟರಿನಲ್ಲಿ ಹಲಸಿನ ಉತ್ಪನ್ನ ಮಾರುತ್ತಿದ್ದಾರೆ. ಮೂರು ವರ್ಷದ ಹಿಂದೆ ಆರಂಭಿಸಿದ ಈ 'ಮೂಲೆ'ಯಲ್ಲಿ ಮೂವತ್ತಕ್ಕೂ ಹೆಚ್ಚು ಹಲಸಿನ ಸಿದ್ಧ ಉತ್ಪನ್ನಗಳು ಲಭ್ಯ.

ಚಕ್ಕಮುಕ್ಕಿನ ಹಲಸಿನ ತಯಾರಿಗಳನ್ನು ಮನೆಗೇ ತಲಪಿಸುವುದು ಖ್ಯಾತ ಆನ್‌ಲೈನ್ ಫುಡ್ ಡೆಲಿವರಿ ಸಂಸ್ಥೆ 'ಉಬರ್ ಈಟ್ಸ್'. ಈ ಸಂಸ್ಥೆ ಕೂಡಾ ಒಂದೆಡೆಯಿಂದ ಒಂದೇ ಕಚ್ಚಾವಸ್ತುವಿನ ತಯಾರಿಗಳನ್ನು ಡೆಲಿವರಿ ಮಾಡುವುದು ಇದುವೇ ಪ್ರಥಮವಂತೆ!

## ರುಚಿ ವೈವಿಧ್ಯ

ಇವರ ಹಲಸಿನ ಸವಿಪಾಕದಲ್ಲಿ ಹಲಸಿನ ಬೀಜದ ಪಾಯಸ, ಹಲಸಿನ ನಸು ಸಿಹಿಯ ತಿಂಡಿ ಎಲೆಯಡ, ಹಲಸಿನ ಬೀಜದ ಅವಲೋಸ್ ಉಂಡೆ, ಹಲಸಿನಹಣ್ಣಿನ ಮಿಲ್ಕ್ ಶೇಕ್, ಹಲಸಿನಹಣ್ಣಿನ ಉಣ್ಣಿಯಪ್ಪಮ್ (ಗುಳಿಯಪ್ಪ), ಹಲಸಿನ ಬೀಜದ ರವೆಯೊಂದಿಗೆ ಮೊಳಕೆ ಬರಿಸಿದ ಧಾನ್ಯ ಸೇರಿಸಿದ ಗಂಜಿ, ಚಕ್ಕ ಪುಳುಕ್ – ಹೀಗೆ ಕೆಲವೇ ಗಂಟೆಗಳ ತಾಳಿಕೆ ಇರುವ ತಯಾರಿಗಳಿವೆ. 'ಚಕ್ಕ ಪುಳುಕ್' ಎಂದರೆ ಕಾಯಿ ಹಲಸಿನ ಸೊಳೆಯಿಂದ ತಯಾರಿಸುವ ಒಂದು ಥರದ ಪಲ್ಯದಂತಹ ಸಾಂಪ್ರದಾಯಿಕ ಊಟದ ತಯಾರಿ. ಕಾಯಿಸೊಳೆಯಲ್ಲಿರುವ ಕಡಿಮೆ ಗ್ಲೈಸೆಮಿಕ್ ಇಂಡೆಕ್ಸ್‌ನಿಂದಾಗಿ ಇದು ಕೇರಳದಲ್ಲಿ ಮಧುಮೇಹಿಗಳಿಗೆ ಜನಪ್ರಿಯ ಆಹಾರ. ಬೇಕಾದರೆ, ಇದೂ ಮನೆ ಬಾಗಿಲಿಗೆ ಬರುತ್ತದೆ.

## ಅರ್ಧ ಗಂಟೆಯೊಳಗೆ

ಬೆಳಗ್ಗೆ 11 ಗಂಟೆಯಿಂದಾರಂಭಿಸಿ ರಾತ್ರಿ 9ರವರೆಗೂ ಇವರ ಮನೆ ಸರಬರಾಜು ನಡೆಯುತ್ತದೆ. 'ಪಾಯಸ, ಉಣ್ಣಿಯಪ್ಪಂಗಳಂತಹ ಐಟಂಗಳನ್ನು ಆರ್ಡರ್ ಬಂದ ಮೇಲೆಯೇ ತಯಾರಿಸುತ್ತೇವೆ. ನಾವು ಇಲ್ಲಿಂದ ಈ ತಯಾರಿಗಳನ್ನು ಬಿಸಿ ಮಾಡಿ ಪ್ರತ್ಯೇಕವಾದ ಪ್ಲಾಸ್ಟಿಕ್ ಕರಡಿಗೆಗಳಲ್ಲಿ ತುಂಬಿ ಕಳಿಸುತ್ತೇವೆ. ಬಹುತೇಕ ಇಲ್ಲಿಂದ ಹೊರಟು ಅರ್ಧ ಗಂಟೆಯ ಒಳಗೆ ಇವು ಗ್ರಾಹಕರ ಮನೆ ಸೇರುತ್ತವೆ' ಎನ್ನುತ್ತಾರೆ ಪ್ರಪಂಚ ಗ್ರೀನ್ ಮಾರ್ಟ್ ಒಡೆಯ ಶಾಜಿ ಜಿ.ಆರ್.

ಇವರ ಹಲಸು ರುಚಿಗಳಲ್ಲಿ ಸ್ವಲ್ಪ ಹೆಚ್ಚು ಕಾಲ ತಾಳಿಕೆ ಇರುವ 'ಚಕ್ಕ ಹಲ್ವ', 'ಚಕ್ಕ ವರಟ್ಟಿ' (ಮಲೆಯಾಳದಲ್ಲಿ ಚಕ್ಕ ಎಂದರೆ ಹಲಸು) ಹಲಸಿನ ಬೀಜದ ಚಟ್ನಿ ಹುಡಿ ಇತ್ಯಾದಿಗಳು ಇವೆ. ವರಟ್ಟಿ ಹಲ್ವಕ್ಕಿಂತ ಸ್ವಲ್ಪ ತೆಳ್ಳಗಿನ ಕೇರಳದ ಜನಪ್ರಿಯ ಸಾಂಪ್ರದಾಯಿಕ ಉತ್ಪನ್ನ. ಇದನ್ನು ನೇರವಾಗಿ ತಿನ್ನಬಹುದು, ಪಾಯಸ, ಹಲ್ವ ತಯಾರಿಸಲೂಬಹುದು.

ಹಸುವಿನ ಹಾಲು ಮತ್ತು ಹಲಸಿನಹಣ್ಣಿನ ಸೊಳೆ ಸೇರಿಸಿ ಗಿರಾಕಿಗಳ ಎದುರೇ ಮಾಡಿಕೊಡುವ 'ಚಕ್ಕ ಐಸ್‌ಕ್ರೀಮ್' ಇಲ್ಲಿಯ ವಿಶೇಷ. ಇದಕ್ಕಾಗಿ ಇವರು ಲಭ್ಯ ಇರುವಾಗಲೆಲ್ಲಾ ಕೆಂಪು ಸೊಳೆಯ ಚಂದ್ರ ಹಲಸು (ಮಲೆಯಾಳದಲ್ಲಿ ಚೆಂಬರತ್ತಿ ಚಕ್ಕ) ಅಥವಾ ಜೇನು ಹಲಸಿನ ಸೊಳೆ ಬಳಸುತ್ತಾರೆ. ಇತ್ತೀಚೆಗಷ್ಟೇ ನಮ್ಮ ದೇಶದಲ್ಲಿ ಆರಂಭವಾದ ಈ 'ಕಣ್ಣೆದುರೇ ಮಾಡುವ ಐಸ್‌ಕ್ರೀಮಿಗೆ' ರೋಲ್ ಐಸ್‌ಕ್ರೀಮ್ ಎಂದು ಹೆಸರು. ಆನ್‌ಲೈನಿನಲ್ಲೂ ಇದಕ್ಕೆ ಒಳ್ಳೆ ಬೇಡಿಕೆಯಿದೆಯಂತೆ.

ಅಕ್ಕಿ ಸೇರಿಸಿ ಆವಿಯಲ್ಲಿ ಬೇಯಿಸುವ ನಸು ಸಿಹಿ ಭಕ್ಷ್ಯ ಎಲೆಯಡ. ಇದನ್ನು ಎಲೆಯೊಳಗೆ ಮಡಚಿಟ್ಟು ಬೇಯಿಸುವ ಕಾರಣ ಈ ಹೆಸರು. ಚಕ್ಕಮುಕ್ಕ್ ಮೂರು ಥರದ ಎಲೆಯಡ ಮಾಡುತ್ತಿದೆ. ಮೊದಲನೆಯದು ದಕ್ಷಿಣ ಕೇರಳದ ಜನಪ್ರಿಯ 'ವಾಯನ ಎಲೆ'ಯಲ್ಲಿ (ಕಾಡು ದಾಲ್ಚಿನ್ನಿ, ಬೆಲ್ಲಂತೊಟ್ಟು ಎಲೆ) ತಯಾರಿಸುವ ಕುಂಬಳಪ್ಪಮ್. ಎರಡನೆಯದು ಹಲಸಿನ ಎಲೆಯಲ್ಲಿ ಮಾಡುವ ಅಡ ಇವರ ವಿಶೇಷ. ಮಲೆಯಾಳದಲ್ಲಿ 'ವಟ್ಟ ಎಲೆ' ಎಂದು ಕರೆಯುವ ಮರದ ಎಲೆ ಬಳಸಿ ಇವರು ತಯಾರಿಸುವ ಇನ್ನೊಂದು ಅಡ 'ಚಕ್ಕ ಕೀಳಿ.' ಇವೆಲ್ಲವೂ ಬೇಯುವಾಗ ಆಯಾಯಾ ಎಲೆಗಳ ನಸು ಪರಿಮಳ ತಮ್ಮೊಳಗೆ ಸೇರಿಸಿಕೊಂಡಿರುತ್ತವೆ.

ಅರೆಸಿದ್ಧ ಉತ್ಪನ್ನಗಳೂ ಇವೆ. ಉದಾಹರಣೆಗೆ, ಮೊಳಕೆ ಬರಿಸಿದ ಧಾನ್ಯ ಮತ್ತು ತೌಡುಯುಕ್ತ ಅಕ್ಕಿ ಸೇರಿಸಿ ಮಾಡಿದ ಗಂಜಿ ಮಿಕ್ಸ್ ಮತ್ತು ಹಲಸಿನ ಬೀಜದ ಅವಲೋಸ್ ಹುಡಿ.

'ಚಕ್ಕ ಮುಕ್ಕ್'ನ ಆನ್‌ಲೈನ್ ಹಲಸು ತಯಾರಿ ಸರಬರಾಜು ಆರಂಭವದದ್ದು ಸೆಪ್ಟೆಂಬರ್ 6ರಂದು. 'ನಾವು ಪ್ರತಿಯೊಂದು ಉತ್ಪನ್ನವೂ ನೂರು ರೂಪಾಯಿಗಿಂತ ಒಳಗಿನ ಮೂಲ ಬೆಲೆ ಹೊಂದುವಂತೆ ಅವುಗಳ ಪ್ರಮಾಣವನ್ನು ಹೊಂದಾಣಿಕೆ ಮಾಡಿಕೊಂಡಿದ್ದೇವೆ. ಉದಾಹರಣೆಗೆ, ಕಾಲು ಕಿಲೋ ಚಕ್ಕ ವರಟ್ಟಿಗೆ 90 ರೂ. ಚಕ್ಕ ರೋಲ್ ಐಸ್ ಕ್ರೀಮಿಗೆ 80 ರೂ. ಹಲಸು ಮತ್ತು ಹಲಸಿನ ಬೀಜದ (ಹಬೀ) ಪಾಯಸ ಎರಡಕ್ಕೂ ಕಾಲು ಲೀಟರಿಗೆ 60 ರೂ. ಚಕ್ಕ ಮಿಲ್ಕ್ ಶೇಕಿಗೆ 90. ರೂ. ಉಬರ್ ಈಟ್ಸ್ ಒಂದು ಬಾರಿಯ ಡೆಲಿವರಿಗೆ 10 ರೂಪಾಯಿ ತೆಗೆದುಕೊಳ್ಳುತ್ತದೆ' ಎನ್ನುತ್ತಾರೆ ಶಾಜಿ.

## ಗ್ರಾಹಕವಲಯ ವಿಸ್ತರಣೆ

'ಹಲಸಿನ ರುಚಿ ಆನ್‌ಲೈನ್ ಸಿಗತೊಡಗಿರುವುದೇ ಹೊಸತು. ನಿಧಾನವಾಗಿ ಈ ಕಡೆ ಗ್ರಾಹಕ ಒಲವು